**ದಿನಾಂಕ : 25-01-2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಎಫ್ ಎಂ ಎಂ ವಕೀಲರಿಂದ :**

ನಾನು ಇತ್ತೀಚೆಗೆ ಹಾಜರು ಪಡಿಸಿದ ದಾಖಲೆಗಳನ್ನು ಈ ಮೊದಲು ನಜರಚೂಕಿನಿಂದ ಹಾಜರು ಪಡಿಸಿರಲಿಲ್ಲ. ನಿಪಿ-**20** ರ ದಾಖಲೆಯಲ್ಲಿ ತೋರಿಸಿದ ಆಸ್ತಿ ನಂ **33** ನೇದ್ದಕ್ಕೆ ಸಂಬಂಧಿಸಿದಂತೆ ಬ್ಯಾಡಗಿ ಸಿವಿಲ್ ಕೋರ್ಟಿನಲ್ಲಿ ದಾವೆ ಇರುತ್ತದೆ ಎಂದರೆ ಸರಿ ಅಲ್ಲ. ಅದರ ನಂಬರು ಓಎಸ್‌ನಂ **167/2018** ಇರುತ್ತದೆ ಎಂದರೆ ಸರಿ ಅಲ್ಲ. ಸದರಿ ದಾವೆ ಇತ್ಯರ್ಥಕ್ಕೆ ಇದ್ದರೂ ಸಹ ಇರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಓಎಸ್‌ನಂ **122/2018** ರ ದಾವೆಯಲ್ಲಿ ಆದ ಮಧ್ಯಂತರ ಆದೇಶದ ವಿರುದ್ಧ ನಾವು ರಿಟ್ ಪೆಟಿಶಿನ್ ಹಾಕಿರುತ್ತೇವೆ ಎಂದರೆ ಸರಿ. ಓಎಸ್‌ನಂ **167/2018** ರ ದಾವೆಯಲ್ಲಿ ಆದ ಮಧ್ಯಂತರ ಆದೇಶದ ವಿರುದ್ಧ ರಿಟ್ ಪೆಟಿಶಿನ್ ಸಲ್ಲಿಸಿರುವುದಿಲ್ಲ ಎಂದರೆ ಸರಿ ಅಲ್ಲ. ಹನುಮಂತಪ್ಪ, ಈರಪ್ಪ, ಶಂಕ್ರಪ್ಪ ಉಪ್ಪುಣಸಿ ಇವರು ಆಸ್ತಿ ನಂ **33** ನೇದ್ದಕ್ಕೆ ಸಂಬಂಧಿಸಿದಂತೆ ಮಾಲಿಕರು ಮತ್ತು ಕಬ್ಜಾದಾರರು ಇರುವ ಬಗ್ಗೆ ಹಾಗೂ ನಿರ್ಬಂಧಕಾಜ್ಞೆಗಾಗಿ ಓಎಸ್ ನಂ **167/2018** ನೇದ್ದನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ದಾವೆ ಇತ್ಯರ್ಥದಲ್ಲಿ ಇರುವಾಗ ತಾಲೂಕಾ ಪಂಚಾಯತಿ ಅಧ್ಯಕ್ಷರ ಜೊತೆಯಲ್ಲಿ ಶಾಮೀಲಾಗಿ ನಾನು ಕಾನೂನಿಗೆ ವಿರುದ್ಧವಾಗಿ ಆಸ್ತಿ ನಂ **33** ನೇದ್ದಕ್ಕೆ ಸಂಬಂಧಿಸಿದ ಆಸ್ತಿಯ ಉತಾರೆಯಲ್ಲಿ ನನ್ನ ತಂದೆಯ ಹೆಸರನ್ನು ಮಾತ್ರ ಸೇರಿಸಿಕೊಂಡಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಆಸ್ತಿಯ ಉತಾರೆಯಲ್ಲಿ ನಮ್ಮ ತಂದೆಯ ಹೆಸರು ಸೇರಿಸಿದ ವಿಷಯಕ್ಕೆ ಸಂಬಂಧವಾಗಿ ಈ ಮೇಲೆ ಹೆಸರಿಸಿದ **3** ಜನ ವ್ಯಕ್ತಿಗಳು ಜಿಲ್ಲಾ ಪಂಚಾಯತಿ ಅಧ್ಯಕ್ಷರ ಮುಂದೆ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಮೇಲ್ಮನವಿ ಇನ್ನೂ ಇತ್ಯರ್ಥಕ್ಕೆ ಇರುತ್ತದೆ ಎಂದರೆ ಸರಿ. ಓಎಸ್‌ನಂ **122/2018** ನೇದ್ದವರ ದಾವೆಯಲ್ಲಿ ಆಸ್ತಿ ನಂ **33** ಕ್ಕೆ ಸಂಬಂಧಿಸಿದಂತೆ ನಮ್ಮ ತಂದೆ ಸಾಕ್ಷ್ಯ ನುಡಿದಿದ್ದಾರೆ ಎಂದರೆ ಸರಿ. **2** ನೇ ಪ್ರತಿವಾದಿ ಈರಪ್ಪ ದಾಖಲಿಸಿದ ಕ್ರಿಮಿನಲ್ ಪ್ರಕರಣದಲ್ಲಿ ನಮ್ಮ

ತಂದೆ ಪ್ರತಿ ಮುದ್ದತ್ತಿಗೆ ಇದೇ ಕೊರ್ಟಿಗೆ ಬಂದು ಹೋಗಿದ್ದಾರೆ ಎಂದರೆ ಸರಿ. ನಮ್ಮ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ನಿಜ ಸಂಗತಿಗಳು ಹೊರ ಬರುತ್ತವೆ ಎನ್ನುವ ಕಾರಣಕ್ಕೆ ನಾನು ನಮ್ಮ ತಂದೆಯಿಂದ ಸುಳ್ಳು ಸಂಗತಿಗಳನ್ನು ನಮೂದಿಸಿಕೊಂಡು ಜಿಪಿಎ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ ಅಲ್ಲ. ನಿಪಿ-**19** ಮತ್ತು **20** ನೇದ್ದರ ದಾಖಲೆಗಳಲ್ಲಿ ಆಸ್ತಿಗಳ ಚಕ್ಬಂದಿ ಮತ್ತು ಅಳತೆ ನಮೂದಿಸಿಲ್ಲ ಎಂದರೆ ಸರಿ .

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.